ಮುದ್ರಿತ ಹಾಳೆಗಳಾಗಿ ಹಾಯಾಗಿ ಹಗುರವಾಗಿ ಸಣ್ಣ ಮೊಳೆಯೊಂದಕ್ಕೆ ಜೋತಾಡಿಕೊಂಡಿವೆ. ಗಾಳಿ ಬಂದರೆ ಹಾಳೆಗಳು ಪಟಪಟಗುಡುತ್ತವೆ. ಒದ್ದೆಯಾದರೆ ಅಕ್ಷರ ಆಕಾರ ಮಾಸುತ್ತದೆ. ಗಾಳಿ ಇನ್ನೂ ಜೋರಾದರೆ ಪುಟಗಳು ಬಿಡಿಸಿ ಹಿಂದಿನದನ್ನೂ ಮುಂದಿನದನ್ನೋ ಅರೆ ಮುಚ್ಚಿ ಅರೆ ಬಿಚ್ಚಿ ತೋರಿಸುತ್ತವೆ. ಇನ್ನು ಪುಟದ ಚೌಕಳಿಯಲ್ಲಿ ತಾನಾಗಿ ತೋರುವುದನ್ನು ಮೀರಿದ ಮಾಹಿತಿಯೂ ಬಳಸುವವರ ಸ್ವಯಂ ಹಸ್ತಾಕ್ಷರದಲ್ಲಿ ದಾಖಲಾಗಬಹುದು. ಆಯಾ ದಿನ ತರಿಸಿದ ಹಾಲಿನ ಅಳತೆ, ಹಳೆಯ ಗ್ಯಾಸ್ ಸಿಲಿಂಡರ್ ಹಿಂತಿರುಗಿಸಿ ಹೊಸದು ಬಂದ ದಿನ, ಯಾರಿಗೋ ಕೊಟ್ಟ ಸಾಲ, ಇನ್ಯಾರಿಂದಲೋ ಪಡೆದ ಕಡ, ಯಾರೋ ಮುಖ್ಯರಾದವರ ಅಲ್ಲದಿದ್ದರೆ ಅಕಸ್ಮಾತ್ ಮನೆಗೆ ಬಂದವರ ದೂರವಾಣಿ ಸಂಖ್ಯೆ ಅಲ್ಲದಿದ್ದರೆ ಆಗಷ್ಟೇ ಹರಿದ ಬಟ್ಟೆಯನ್ನು ಹೊಲಿದ ಇನ್ನೂ ತುಂಡು ದಾರ ನೇತಾಡುವ ಸೂಜಿ ಚುಚ್ಚಿರಲೂಬಹುದು ಹಾಳೆಯ ಮೂಲೆಗೆ.

ಇನ್ನು ಭೂಮಂಡಲದ ಯಾವ ದೇಶದ ಊರಿನ ಮನೆಯ ಗೋಡೆಯ ಮೇಲೆ ಕ್ಯಾಲೆಂಡರ್ ಸ್ಥಾಪಿತವಾಗಿದೆ ಎನ್ನುವುದರ ಮೇಲೆ ಕೆಲವೊಮ್ಮೆ ಗೋಡೆಯ ಮೇಲಿನ ಪ್ರಾಣಿವರ್ಗ, ಕೀಟ ಪ್ರಪಂಚ, ಅಲ್ಲೊಂದು ತಾತ್ಕಾಲಿಕ ಆಸರೆ ಪಡೆಯುವುದಿದೆ. ಮತ್ತೆ ಅವೆಲ್ಲ ಸೇರಿ ಮನೆಯೊಳಗಿರುವ ಎಲ್ಲ ದೊಡ್ಡ ದೇಹದ ಮನುಷ್ಯರನ್ನು ಪೂರ್ತಿ ಕಡೆಗಣಿಸಿ ಆ ತಾವನ್ನೇ ತುಸುಹೊತ್ತು ರಂಗ ವೇದಿಕೆಯನ್ನಾಗಿ ಆಟದ ಬಯಲನ್ನಾಗಿ ನಿರ್ಮಿಸಿಕೊಳ್ಳುವುದಿದೆ. ರಾತ್ರಿ ಮನೆಯೊಳಗಿನ ದೀಪಕ್ಕೆ ಹಾದಿ ಹುಡುಕಿ, ಅಲ್ಲದಿದ್ದರೆ ತಪ್ಪಿ ಬರುವ ಪತಂಗಗಳು ಈ ಹಾಳೆಗಳನ್ನೇ ಮನೆ ಅಲ್ಲದಿದ್ದರೆ ಮರೆ ಆಗಿಸಿಕೊಳ್ಳುವುದಿದೆ. ಬೆಳಕಿಗೆ ಹಾರಿ ಬಂದ ಇಂತಹ ಕೀಟಗಳ ಮೇಲೆ ಅಚಾನಕ್ ದಾಳಿ ಮಾಡುವ ಬೆಳಗಿನಿಂದ ಹಸಿದು ಕೂತ ಹಲ್ಲಿಯೂ ಕ್ಯಾಲೆಂಡರ್ ಮರೆಯಲ್ಲಿಯೇ ನಿಂತು ಬಾಲ ತಿರುವಿ ಚಂಗನೆ ಹಾರಿ ಬೇಟೆಯನ್ನು ಕಚ್ಚಿ ಅದುಮಿ ಮತ್ತೆ ಕ್ಯಾಲೆಂಡರ್ ಹಿಂದುಗಡೆ ಮರೆ ಆಗುವುದಿದೆ. ಗೋಡೆಯ ಮೇಲಿನ ಜೀವಂತ ಕಾಲದಲ್ಲಿ ಬೇಟೆಗಾರ ಬೇಟೆ ಮತ್ತೆ ಈಡು ಜೊತೆಜೊತೆಗೆ ಹಾಳೆಗಳ ಹಿಂದಿನ ನೇಪಥ್ಯಕ್ಕೆ ಸರಿಯುವುದಿದೆ.

ಬಿಡಿ, ಕ್ಯಾಲೆಂಡರ್ ದೊಡ್ಡದೋ ಚಿಕ್ಕದೋ ವಿಷಯವಲ್ಲ. ಅಥವಾ ಕಾಲದ ಹಾಳೆಗಳ ಅಡಿಯಲ್ಲಿ ಯಾರು ಹೇಗೆ ಅಡಗಿ ಹುದುಗಿ ಬೇಟೆ ಆಡುತ್ತಾರೆ, ಸ್ವತಃ ಬೇಟೆ ಆಗುತ್ತಾರೆ ಎನ್ನುವುದೂ ಮುಖ್ಯವಲ್ಲ. ಯಾಕೆಂದರೆ ಯಾವ ಊರಿನ ಕ್ಯಾಲೆಂಡರಿನ ಯಾವ ಹಾಳೆಯ ಚೌಕಳಿಯಲ್ಲಿ ಯಾವ ಶಕೆ, ತಿಂಗಳು, ಅಂಕೆ ಇಂದು ನಡೆಯುತ್ತಿದ್ದರೂ ಇಂಗ್ಲೆಂಡ್‌ನಲ್ಲಿ ಇದೀಗ ಕಗ್ಗತ್ತಲೆಯ ಕಡುಚಳಿಯ ಕುಳಿರು ಗಾಳಿಯ ಕಾಲ. ಜೀವಜಂತುಗಳು ನಿರ್ಜೀವ ವಸ್ತುಗಳೂ ಅಂತರ್ಮುಖಿಯಾಗಿ ಕಪ್ಪಿಗಿಂತ ಕರಿಯದಾದ ಕತ್ತಲೆಯನ್ನೂ, ಮುಂಜಾವಿಗೆ ಬೀಸಿದ ಮಂಜಿನ ಬಲೆಯನ್ನೂ, ನಡುಮಧ್ಯಾಹ್ನದ ತಣ್ಣಗಿನ ನಿರುಪದ್ರವಿ ನಿಸ್ತೇಜ ಸೂರ್ಯನನ್ನೂ ಹೃತ್ಪೂರ್ವಕ ಸ್ವಾಗತಿಸಲೇಬೇಕಾದ ಸಂಧಿಕಾಲ. ಕ್ಯಾಲೆಂಡರ್ ಹಾಳೆಗಳ ಒಂದೆರಡು ಪುಟ ಮಗ್ಗುಲು ಹಿಮ್ಮುಖ ಬದಲಾಯಿಸಿದ್ದರೆ ಗಿಡ ಮರ ಬಳ್ಳಿಗಳು ಹಚ್ಚ ಹಸಿರಿನಲ್ಲಿ ಮೈಮರೆತಿರುತ್ತಿದ್ದವು, ನಾವು ಸುಡುಬಿಸಿಲಿನಲ್ಲಿ ಮೈ ನೆನೆಯಿಸಿಕೊಂಡಿರುತ್ತಿದ್ದೆವು. ಆದರೆ ಈ ಪ್ರಸಕ್ತ ಪ್ರಸ್ತುತದಲ್ಲಿ ವೈಶಾಖದಿಂದ ಬಲವಂತವಾಗಿ ಮೊದಲಿಗೆ ದೈಹಿಕವಾಗಿಯೂ ಮತ್ತೆ ಕೊನೆಗೆ ಮಾನಸಿಕವಾಗಿಯೂ ಅಂತೂ ಹೊರಬಂದುಬಿಟ್ಟಿದ್ದೇವೆ. ಕ್ಯಾಲೆಂಡರ್ ಪುಟ ತಿರುಗಿಸುವುದರಲ್ಲೇ ಕಳೆದುಹೋದ ವೈಶಾಖದ ವಿಚಾರ ಹಾಗಿರಲಿ, ಎಲೆಗಳು ಬಣ್ಣಬದಲಿಸುವ, ಇಡೀ ಪ್ರಕೃತಿ ಅಂದಚಂದದ ಶೃಂಗಾರದಲ್ಲಿ ತೇಲಿ ತೂಗುವ ಶರತ್ ಕಾಲವನ್ನು ಹೊಕ್ಕು, ಹಾಗೇ ಬದಲಾದ ಎಲೆಗಳೆಲ್ಲ ಉದುರಿ ಬಿದ್ದ ಹೇಮಂತವನ್ನು ದಾಟಿ ಇನ್ನೂ ಮತ್ತೂ ಮುಂದುವರಿದು ಶಿಶಿರದ ಹೆಬ್ಬಾಗಿಲಿನಲ್ಲಿ ನಿಟ್ಟುಸಿರು ಬಿಡುತ್ತ ನಿಂತಿದ್ದೇವೆ. ಬೇಕಿದ್ದರೂ ಬೇಡಿದ್ದರೂ ಇನ್ನು ಚಳಿಯ ಮಾಸದಲ್ಲಿ ಮಿಂದು ತೋಯುವುದು ಮಾತ್ರ ನಾನಿರುವ ಭೂಪ್ರದೇಶಕ್ಕೆ ಇರುವ ಏಕೈಕ ಆಯ್ಕೆ.

ಕ್ಯಾಲೆಂಡರಿನ ಯಾಂತ್ರಿಕ ವೇಳಾಪಟ್ಟಿ ಜನವರಿಯಿಂದ ಡಿಸೆಂಬರಿನ ಕಾಲವನ್ನು ಯಾವ ಭಾವೋದ್ರೇಕ ಅತಿರೇಕ ಇಲ್ಲದೆ, ಇದ್ದದ್ದು ಇದ್ದಹಾಗೆ ವಿಭಾಗಿಸಿ ಪುಟ ತಿರುವಿ ಅದೇ ಅದೇ ಅಂಕೆಸಂಖ್ಯೆಗಳ ಮೂಲಕ ಕಣ್ಣೆದುರು ಪ್ರದರ್ಶಿಸುತ್ತಿದ್ದರೂ, ಪ್ರಕೃತಿಯ ಅಂತರ್ಗತ ಕಾಲಯಂತ್ರ ಮಾತ್ರ ಭಾವ